**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2023**

**ಸಾಕ್ಷಿಗೆ ದಿನಾಂಕ 2.9.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಶಕುಮಾರ್ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಸ್ವಾಮಿ | ಸಿ.ಡಬ್ಲ್ಯೂ-3 |
| ವಯಸ್ಸು | : | 27 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಮುಷ್ಕರೆ ಹಾಡಿ | |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ದಿನಾಂಕ 25.4.2023 ರಂದು ಸಂಜೆ 5 ಗಂಟೆಯ ಸಮಯದಲ್ಲಿ ಅಣ್ಣೂರು ಗ್ರಾಮದಿಂದ ಗದ್ದಿಗೆಗೆ ನನಗೆ ಸಂಬಂಧಪಟ್ಟ ಕೆಎ 45 ಯು8109 ಬೈಕಿನಲ್ಲಿ ಹೋಗುತ್ತಿದ್ದಾಗ ಅಣ್ಣೂರು ಗ್ರಾಮದಿಂದ 1 ಕಿ.ಮೀ ದೂರದಲ್ಲಿ ಹೆಸರು ಗೊತ್ತಿಲ್ಲದ ಒಂದು ಮನೆಯ ಹತ್ತಿರ ನನ್ನ ಹಿಂಬದಿಯಿಂದ ಒಬ್ಬ ಬೈಕ್ ಸವಾರನು ನನ್ನನ್ನು ಓವರ್ ಟೇಕ್ ಮಾಡಿ ಅತಿವೇಗದಿಂದ ಬೈಕನ್ನು ಚಲಾಯಿಸಿಕೊಂಡು ಹೋಗಿ ಅಣ್ಣೂರು ಕಡೆಗೆ ದನಗಳನ್ನು ಮೇಯಿಸಿಕೊಂಡು ಬರುತ್ತಿದ್ದ 3 ಜನ ಹೆಂಗಸರ ಪೈಕಿ ಒಬ್ಬರಿಗೆ ಡಿಕ್ಕಿ ಮಾಡಿರುತ್ತಾನೆ. ಆ ರೀತಿ ಡಿಕ್ಕಿ ಮಾಡಿದಾಗ ದನಗಳು ಗಾಬರಿಯಿಂದ ರಸ್ತೆಯಲ್ಲಿ ಓಡಾಡಿದ್ದರಿಂದ ನಾನು ಬೈಕಿನಲ್ಲಿ ಆಯತಪ್ಪಿ ರಸ್ತೆಯ ಎಡಭಾಗದಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಮಾಡಿರುತ್ತೇನೆ. ಡಿಕ್ಕಿಯಾಗಿದ್ದರಿಂದ ನನ್ನ ಎಡಗೈ ಕಿರುಬೆರಳು, ಎಡಗಣ್ಣಿನ ಹತ್ತಿರ ಪೆಟ್ಟಾಗಿರುತ್ತದೆ. ಆಗ ಸ್ಥಳದಲ್ಲಿದ್ದ ಸುಮಾರು ಜನ ಸೇರಿದ್ದು, ಅವರ ಪೈಕಿ ಕೆಲವರು ನನಗೆ ಹಾಗೂ ಹೆಂಗಸಿಗೆ ಡಿಕ್ಕಿ ಮಾಡಿದ್ದ ವ್ಯಕ್ತಿಗೆ ಎರಡು ಏಟು ಹೊಡೆದಿರತ್ತಾರೆ. ಸದರಿ ಹೆಂಗಸಿಗೆ ಮೂಗು ಮತ್ತು ಬಾಯಿಯಲ್ಲಿ ರಕ್ತ ಬರುತ್ತಿದ್ದು, ಕೈಗೆ ಪೆಟ್ಟಾಗಿತ್ತು. ನಂತರ ಸದರಿ ಮಹಿಳೆಯ ಹೆಸರು ಮಲ್ಲಿಗಮ್ಮ, ಅಣ್ಣೂರು ಎಂದು ಗೊತ್ತಾಗಿರುತ್ತದೆ. ನಂತರ ಅಪಘಾತ ಮಾಡಿದ ಬೈಕ್ ನಂಬರನ್ನು ನೋಡಲಾಗಿ ಅದು ಕೆಎ 09 ಜೆಎಫ್ 6835 ಅಗಿದ್ದು ಅದು ಪ್ಯಾಶನ್ ಪ್ರೋ ಬೈಕ್ ಆಗಿರುತ್ತದೆ. ನಂತರ ಸದರಿ ಬೈಕ್ ಚಾಲಕನ ಹೆಸರನ್ನು ಕೇಳಲಾಗಿ ತನ್ನ ಹೆಸರು ಕುಮಾರ್, ಕೂಗಿಲವಾಡಿ, ಪಿರಿಯಾಪಟ್ಟಣ ಎಂದು ತಿಳಿಸಿರುತ್ತಾನೆ. ನಂತರ ನನ್ನನ್ನು ಅಂಬುಲೆನ್ಸನಲ್ಲಿ ಹೆಚ್.ಡಿ.ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಸದರಿ ಅಪಘಾತಕ್ಕೊಳಪಟ್ಟ

ಮಹಿಳೆಯು ತೀರಿಕೊಂಡಿರುತ್ತಾರೆ ಎಂದು ಹೆಚ್.ಡಿ.ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರುಹಾಜರಾಗಿದ್ದು ಆತನನ್ನು ನೋಡಿ ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಘಟನೆಯ ಸಂಬಂಧವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತದ ನಂತರ ನನಗೆ ಸಂಬಂಧಪಟ್ಟ ಬೈಕನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ನೋಡುತ್ತಿರುವ ನಿಪಿ5 ಮತ್ತು 6 ಭಾವಚಿತ್ರದಲ್ಲಿರುವ ಬೈಕು ಅಪಘಾತ ಮಾಡಿದ ಬೈಕಾಗಿರುತ್ತದೆ. ನಿಪಿ6 ಭಾವಚಿತ್ರದಲ್ಲಿರುವ ವ್ಯಕ್ತಿ ಆರೋಪಿಯಾಗಿರುತ್ತಾನೆ. ನನಗೆ ಸಂಬಂಧಪಟ್ಟ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬೈಕಿಗೆ ಸಂಬಂಧಪಟ್ಟ ಭಾವಚಿತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್.ಕೆ ವಕೀಲರಿಂದಃ</u>**

ನಾನು ಸದರಿ ದಿನ ಭೀಮನಹಳ್ಳಿಗೆ ಕೂಲಿ ಕೆಲಸಕ್ಕೆ ಹೋಗಿರುತ್ತೇನೆ. ನಾನು ಕೆಲಸ ಬಿಟ್ಟಾಗ ಸಂಜೆ 3.30-4 ಗಂಟೆಯಾಗಿತ್ತು. ನಾನು ಕೆಲಸ ಬಿಟ್ಟ ತಕ್ಷಣ ಅಣ್ಣೂರು ಅಂಗಡಿಗೆ ಹೋಗಿರುತ್ತೇನೆ. ನಾನು ಅಂಗಡಿಗೆ ಹೋದಾಗ ಅಂದಾಂಜು 4.30 ಗಂಟೆಯಾಗಿತ್ತು. ನಂತರ ನಾನು ಗದ್ದಿಗೆ ಕಡೆಗೆ ಹೋಗುತ್ತಿದ್ದೆನು. ಸದರಿ ದಿನ 3 ಹೆಂಗಸರನ್ನು ಹೊರತುಪಡಿಸಿ ಅಕ್ಕಪಕ್ಕದ ಜಮೀನಿನಲ್ಲಿ ಜನರು ಕೆಲಸ ಮಾಡುತ್ತಿದ್ದರು. ಸದರಿ ರಸ್ತೆಯಲ್ಲಿ 3 ಜನ ಹೆಂಗಸರನ್ನು ಹೊರತುಪಡಿಸಿ ಬೇರೆ ಯಾರು ಹೋಗುತ್ತಿರಲಿಲ್ಲ. ನನ್ನ ಬೈಕಿನಲ್ಲಿ ನಾನೊಬ್ಬನೇ ಹೋಗುತ್ತಿದೆ. ನನಗೆ ಚಾಲನ ಪರವಾನಗಿ ಇರುವುದಿಲ್ಲ. ನಾನು ಚಾಲನೆ ಮಾಡುತ್ತಿದ್ದ ಬೈಕಿಗೆ ವಿಮೆ ಇತ್ತು. ನಾನು 40-45 ಕಿ.ಮೀ ವೇಗದಲ್ಲಿ ಹೋಗುತ್ತಿದ್ದೆ. ಅಪಘಾತವಾದ ರಸ್ತೆ ಅಂದಾಜು 12 ಅಡಿ ಅಗಲವಿರುತ್ತದೆ. ನನ್ನ ಹಿಂಬಂದಿಯಿಂದ ಬಂದ ಬೈಕಿನ ಚಾಲಕ ಅಂದಾಜು 80-90 ಕಿ.ಮೀ ವೇಗದಲ್ಲಿ ಬೈಕನ್ನು ಚಲಾಯಿಸಿರುತ್ತಾನೆ. ಆತನು ಪ್ಯಾಂಟ್ ಶರ್ಟನ್ನು ಹಾಕಿದ್ದನು. ಮಲ್ಲಿಗಮ್ಮ ರವರು ಕೆಲಸಕ್ಕೆ ಹೋಗುತ್ತಿದ್ದರಿಂದ ನಾನು ಅವರನ್ನು ನೋಡಿರುತ್ತೇನೆ. ನನ್ನ ಮನೆಯಿಂದ ಅವರ ಮನೆ 3 ಕಿ.ಮೀ ದೂರದಲ್ಲಿರುತ್ತದೆ. ನನ್ನ ಅತಿವೇಗ ಹಾಗೂ ಅಜಾಗರೂಕತೆಯಿಂದ ಸದರಿ ಘಟನೆಯಾಗಿರುತ್ತದೆ ಎಂದರೆ ಸರಿಯಲ್ಲ. ಅಂಬುಲೆನ್ಸಗೆ ಯಾರು ಪೋನ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ನಂತರ ನನಗೆ ಸುಸ್ತಾಗಿ ತಲೆ ತಿರುಗುತ್ತಿತ್ತು, ಪ್ರಜ್ಞೆ ತಪ್ಪಿರುವುದಿಲ್ಲ. ಇನ್ನೊಂದು ಬೈಕಿನ ಚಾಲಕನಿಗೆ ಹೆಚ್ಚಿನ ಪೆಟ್ಟಾಗಿರುವುದಿಲ್ಲ. ನನ್ನ ಬೈಕು ಮತ್ತು ಆರೋಪಿಯ ಬೈಕು ಜಖಂಗೊಂಡಿತ್ತು. ಆರೋಪಿಯ ಬೈಕಿನ ಬಲಭಾಗದದ ಇಂಡಿಕೇಟರ್ ಒಡೆದು, ತರಚಿರುತ್ತದೆ. ನನ್ನ ಬೈಕಿನ ಮುಂಭಾಗ ಪೂರ್ಣ ಜಖಂ ಆಗಿತ್ತು. ಸದರಿ 3 ಜನ ಹೆಂಗಸರ ಪೈಕಿ ಮೃತಪಟ್ಟ ಮಹಿಳೆ ಗದ್ದಿಗೆ ಕಡೆಯಿಂದ ಅಣ್ಣೂರು ಕಡೆಗೆ ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದರು. ಸದರಿ ಮೂರು ಜನ ಹೆಂಗಸರು ನನ್ನ ವಿರುದ್ಧ ದಿಕ್ಕಿನಿಂದ ಬರುತ್ತಿದ್ದರು. ನನ್ನ ಅತಿವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿದ್ದು, ನನಗೆ ಚಾಲನ ಪರವಾನಗಿ ಮತ್ತು ಬೈಕಿಗೆ ವಿಮೆ

ಇಲ್ಲದಿದ್ದರಿಂದ ಪರಿಹಾರ ಪಡೆಯಲು ಆರೋಪಿಯ ಬೈಕ್ ವಿರುದ್ದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ